# ಕನ್ನಡ ಸಾಹಿತ್ಯದಲ್ಲಿ ಎಐ ಬಳಕೆ ಮತ್ತು ಭಾಷಾ ಸಂರಕ್ಷಣೆ ಹಾಗೂ ಅಭಿವೃದ್ಧಿ

**ಅರುಣಕುಮಾರಿ ಬಿ.ಎನ್.***

**DOI: https://doi.org/10.5281/zenodo.21241920**

**ABSTRACT**

ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನವು ಕನ್ನಡ ಸಾಹಿತ್ಯ ಮತ್ತು ಭಾಷಾ ಬೆಳವಣಿಗೆಯಲ್ಲಿ ತರುತ್ತಿರುವ ಕ್ರಾಂತಿಕಾರಿ ಬದಲಾವಣೆಗಳ ಸಾಧಕ-ಬಾಧಕಗಳನ್ನು ಇಲ್ಲಿ ಕೂಲಂಕಷವಾಗಿ ವಿಶ್ಲೇಷಿಸಲಾಗಿದೆ. ಎಐ ತಂತ್ರಜ್ಞಾನವು ಕೃತಿಗಳ ಅನುವಾದ, ಹಳೆಯ ಹಸ್ತಪ್ರತಿಗಳ ಡಿಜಿಟಲ್ ಸಂರಕ್ಷಣೆ, ಶಿಕ್ಷಣ-ಸಂಶೋಧನೆಗೆ ಹೊಸ ಆಯಾಮ, ಹಾಗೂ ಹೊಸ ಪದಗಳ ಸೃಷ್ಟಿಗೆ ಮಹತ್ವದ ಕೊಡುಗೆ ನೀಡುತ್ತಿದೆ. ಧ್ವನಿ-ಮಾರ್ಗದ ಟೈಪಿಂಗ್ ಮತ್ತು ಡಿಜಿಟಲ್ ಉಪಕರಣಗಳು ಭಾಷೆಯ ಪ್ರಸರಣವನ್ನು ಸುಲಭಗೊಳಿಸಿವೆ. ಆದಾಗ್ಯೂ, ತಂತ್ರಜ್ಞಾನದ ಮೇಲಿನ ಅತಿಯಾದ ಅವಲಂಬನೆಯಿಂದ ಮಾನವನ ಸಹಜ ಸೃಜನಶೀಲತೆ ಹಾಗೂ ಸ್ವತಂತ್ರ ಆಲೋಚನೆ ಕುಂಠಿತವಾಗುವ ಅಪಾಯವಿದೆ. ನಿಖರತೆಯ ಕೊರತೆ, ಡೇಟಾ ಗೌಪ್ಯತೆಯ ಸವಾಲುಗಳು, ಯಾಂತ್ರಿಕ ರಚನೆ ಹಾಗೂ ಪ್ರಾದೇಶಿಕ ಸೊಗಡಿನ ನಾಶದಂತಹ ಗಂಭೀರ ಸಮಸ್ಯೆಗಳ ಬಗ್ಗೆಯೂ ಎಚ್ಚರಿಸಲಾಗಿದೆ. ಮುಂದಿನ ಪೀಳಿಗೆಗೆ ನಮ್ಮ ಭಾಷೆ, ಸಂಸ್ಕೃತಿ ಮತ್ತು ಜ್ಞಾನಸಂಪತ್ತನ್ನು ದಾಟಿಸಲು ಎಐ ತಂತ್ರಜ್ಞಾನವನ್ನು ಜವಾಬ್ದಾರಿಯುತವಾಗಿ ಹಾಗೂ ಎಚ್ಚರಿಕೆಯಿಂದ ಸ್ವೀಕರಿಸುವ ಅನಿವಾರ್ಯತೆಯನ್ನು ಇಲ್ಲಿ ಪ್ರತಿಪಾದಿಸಲಾಗಿದೆ.

**KEYWORDS:** ಕೃತಕ ಬುದ್ಧಿಮತ್ತೆ (ಎಐ), ಕನ್ನಡ ಸಾಹಿತ್ಯ, ಭಾಷಾ ಸಂರಕ್ಷಣೆ, ಡಿಜಿಟಲೀಕರಣ, ಡಿಜಿಟಲ್ ಸಾಕ್ಷರತೆ.

* **ಡಾ. ಅರುಣಕುಮಾರಿ ಬಿ.ಎನ್.,** ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು (ಸ್ವಾಯತ್ತ), ಗುಬ್ಬಿ.

ಕನ್ನಡದ ಮಟ್ಟಿಗೆ ನೋಡುವುದಾದರೆ ಕನ್ನಡ ಸಾಹಿತ್ಯದಲ್ಲಿ ಕೃತಕ ಬುದ್ಧಿಮತ್ತೆ (ಎಐ) ಇಂದು ಜಾಗತಿಕ ಮಟ್ಟದಲ್ಲಿ ಹೆಚ್ಚು ಸಂಚಲನ ಮೂಡಿಸುತ್ತಿದೆ ಮತ್ತು ಆ ಮೂಲಕ ತಂತ್ರಜ್ಞಾನವು ಕ್ರಾಂತಿಕಾರಿ ಬದಲಾವಣೆಗಳನ್ನು ತರುತ್ತಾ ಕನ್ನಡವನ್ನು ಡಿಜಿಟಲ್ ಯುಗಕ್ಕೆ ದಾಪುಗಾಲಿಡಲು ಪ್ರಯೋಜನಕಾರಿಯಾಗುತ್ತಿದೆ. ಕನ್ನಡವನ್ನು ಮತ್ತು ಕನ್ನಡ ಸಾಹಿತ್ಯವನ್ನು ಜಾಗತಿಕ ಮಟ್ಟದಲ್ಲಿ ಬೆಳೆಸಿ ಹೊಸ ಆಲೋಚನೆಗಳ ಪರಿಧಿಗೆ ಕನ್ನಡವನ್ನು ಕೊಂಡೊಯ್ಯುವ ಶ್ರೇಷ್ಠತೆಗೆ ತಂದು ನಿಲ್ಲಿಸುವ ಪಣ ತೊಟ್ಟಿದೆ. ಈ ನಿಟ್ಟಿನಲ್ಲಿ ನೋಡುವುದಾದರೆ ಕನ್ನಡ ಸಾಹಿತ್ಯದಲ್ಲಿ ಎಐ ಬಳಕೆಯ ಪ್ರಮುಖ ಅಂಶಗಳನ್ನು ಗುರುತಿಸುವುದು ಮತ್ತು ಅದರ ಸಾಧಕ ಬಾಧಕಗಳನ್ನು ಚರ್ಚಿಸುವುದು ಇಂದು ಅಗತ್ಯ ಮತ್ತು ಅನಿವಾರ್ಯ.

**1. ಹಲವು ಭಾಷೆಗಳ ಕೃತಿಗಳ ಅನುವಾದದ ಕಡೆಗೆ ಒಲವು**

ಕನ್ನಡ ಸಾಹಿತ್ಯದಲ್ಲಿ ಅನುವಾದದ ಕೃಷಿ ಹೊಸದಲ್ಲ. ಭಾಷಾ ಜ್ಞಾನದ ಜೊತೆಗೆ ತಂತ್ರಜ್ಞಾನವು ಸೇರಿಕೊಂಡರೆ ಪಠ್ಯರಚನೆ ಅನುವಾದ ಮತ್ತು ಭಾಷಾಂತರದಲ್ಲಿ ಹೊಸ ಆಯಾಮಗಳನ್ನು ಮೂಡಿಸಲು ಸಾಧ್ಯವಾಗುತ್ತದೆ. ಆ ಮೂಲಕ ಭಾಷಾಂತರ ಮಾತ್ರವಲ್ಲದೆ ಒಂದು ಪರಿಸರದ ಸಂಸ್ಕೃತಿ ಮತ್ತು ಸಮುದಾಯದ ಆಮೂಲಾಗ್ರ ಪರಿಚಯ ಸಾಧ್ಯ ಮತ್ತು ಭಾಷೆಯ ಕೊಡುಕೊಳ್ಳುವಿಕೆ ಇದೆಯಲ್ಲ ಇದು ಸಾಹಿತ್ಯದ ಮುಖೇನ ಉಂಟಾಗುವ ಸಾಂಸ್ಕೃತಿಕ ಒಟ್ಟಂದದ ರೂಪಿಸುವಿಕೆ ಎಂದರೆ ತಪ್ಪಿಲ್ಲ.

**2. ಸಂರಕ್ಷಣೆಯ ಹೊಣೆ ಮತ್ತು ಹೊಸ ಮಾದರಿಯ ಅಳವಡಿಕೆ.**

ಕನ್ನಡ ಸಾಹಿತ್ಯದಲ್ಲಿ ಉಲ್ಲೇಖವಿರುವ ಎಷ್ಟೋ ಕೃತಿಗಳು ಇಂದು ಲಭ್ಯವಿಲ್ಲ. ಅರಿವಿನ ಕೊರತೆಯೋ ಅಥವಾ ಸಂರಕ್ಷಣೆಯಲ್ಲಿ ತೋರಿದ ಅನಾದರವೋ ತಿಳಿಯದು. ಆದರೆ ಇಂದು ಎಐ ಬಂದ ನಂತರ ನಶಿಸುತ್ತಿರುವ ಅನೇಕ ಗ್ರಂಥಗಳು ಡಿಜಿಟಲೀಕರಣಗೊಳ್ಳುತ್ತಿರುವುದು ಸಂತಸದ ಸಂಗತಿ. ಅಂದರೆ ಅಪರೂಪದ ಕೃತಿಗಳು, ಹಸ್ತಪ್ರತಿಗಳು ಮತ್ತು ಜನಪದ ಸಾಹಿತ್ಯದ ಹಲವು ಪ್ರಕಾರಗಳು ಈ ಸಂರಕ್ಷಣೆಯ ಮಾದರಿಗೆ ಸೇರ್ಪಡೆಗೊಂಡಿವೆ. ಆ ಮೂಲಕ ಕೇವಲ ಕೃತಿಗಳ ಸಂರಕ್ಷಣೆ ಮಾತ್ರವಾಗಿರದೆ ಭಾಷಾ ಸಂರಕ್ಷಣೆಯಲ್ಲಿಯೂ ಕೂಡ ಈ ನಿಟ್ಟಿನಲ್ಲಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುತ್ತಿದೆ.

ಉದಾ: ಹಳೆಗನ್ನಡ ಸಾಹಿತ್ಯ ಕೃತಿಗಳನ್ನು ಸಂರಕ್ಷಿಸುವುದು ಮಾತ್ರವಲ್ಲದೆ ಮುಂದಿನ ಪೀಳಿಗೆಗೆ ಕನ್ನಡ ಸಾಹಿತ್ಯ ಸಂಪತ್ತು ಯಾವ ರೀತಿ ಬೆಳೆದಿತ್ತು ಎಂಬ ಮಾಹಿತಿಯನ್ನು ಮತ್ತು ಮೌಲ್ಯವನ್ನು ಕೊಡುಗೆಯಾಗಿ ನೀಡುವ ನಿಟ್ಟಿನಲ್ಲಿ ಎಐ ತಂತ್ರಜ್ಞಾನ ಸಾಕಷ್ಟು ಕೆಲಸದಲ್ಲಿ ಯಶಸ್ಸನ್ನು ಪಡೆದಿದೆ. ಒಟ್ಟಾರೆಯಾಗಿ ಹೊಸ ಮಾದರಿಗೆ ಹೊಂದಿಕೊಂಡ ತಲೆಮಾರಿನ ಸಾಹಿತ್ಯ ಪರಂಪರೆ ಮುಂದುವರೆಯಲು ಸಹಕಾರಿಯಾಗುತ್ತದೆ.

**3. ಡಿಜಿಟಲ್ ಉಪಕರಣಗಳ ಬಳಕೆಯ ಮೂಲಕ ಕನ್ನಡ ತಂತ್ರಾಂಶಗಳ ಉಪಯೋಗ**

ಡಿಜಿಟಲ್ ಉಪಕರಣಗಳ ಬಳಕೆಯಿಂದ ಕನ್ನಡ ಸಾಹಿತ್ಯದ ಬೆಳವಣಿಗೆ ವಿವಿಧ ಮಾದರಿಗಳಲ್ಲಿ ವಿಸ್ತರಿಸಿದೆ. ಹಲವು ಯೋಜನೆಗಳನ್ನು ರೂಪಿಸುವ ಮುಖಾಂತರ ಸಾಹಿತ್ಯದ ಬೆಳವಣಿಗೆಯ ಹಾದಿ ಸುಗಮಗೊಳಿಸಿ, ವಿಶೇಷವಾದ ಆಸಕ್ತಿ ಮತ್ತು ಮಾರ್ಗದರ್ಶನ ನಮಗೆ ನೀಡುತ್ತವೆ.

ಉದಾ: 'ಕಲಿಕಾ ದೀಪ' ಯೋಜನೆ ಅಡಿಯಲ್ಲಿ ಕನ್ನಡ ಕಲಿಕೆ ಮತ್ತು ವಿಸ್ತರಣೆಯನ್ನು ಸುಲಭಗೊಳಿಸಿದೆ.

ಧ್ವನಿಯ ಮೂಲಕ ಪಠ್ಯದ ವಿಶ್ಲೇಷಣೆಯ ಮಾದರಿ ಮತ್ತು ಪರಿವರ್ತನೆಯ ತಂತ್ರಜ್ಞಾನಗಳು ಆಡಳಿತ ಮತ್ತು ಶಿಕ್ಷಣದಲ್ಲಿ ಹೆಚ್ಚಾಗಿವೆ. ಆ ಮೂಲಕ ಕನ್ನಡವನ್ನು ಭಾಷಾ ಸಂಪತ್ತು ಎನ್ನುವುದಕ್ಕಿಂತ ಜಾಗತಿಕ ಮಟ್ಟದಲ್ಲಿ ಪರಿವರ್ತನೆಯ ಹಾದಿ ಹಿಡಿದ ಕಣಜ ಎಂದರೆ ತಪ್ಪಿಲ್ಲ. ಡಿಜಿಟಲ್ ಗ್ರಂಥಾಲಯಗಳು ಮತ್ತು ಇ-ಪುಸ್ತಕಗಳ ಮೂಲಕ ಹಳೆಯ ಕನ್ನಡ ಸಾಹಿತ್ಯ ಕೃತಿಗಳ ಸಂರಕ್ಷಣೆ ಮತ್ತು ಸಮೂಹಕ್ಕೆ ತಲುಪಿಸುವ ಪ್ರಯತ್ನದಿಂದಾಗಿ ಕನ್ನಡ ಸಾಹಿತ್ಯ ಓದುಗಲೋಕ ವ್ಯಾಪ್ತಿ ಪಡೆಯಿತು.

**4. ಶಿಕ್ಷಣ ಮತ್ತು ಸಂಶೋಧನೆಗೆ ಹೊಸ ಮಾದರಿ ಹಾಗೂ ರೂಪುರೇಷೆ**

ಕಲಿಕೆಯ ಮಟ್ಟಿಗೆ ಕೃತಕ ಬುದ್ಧಿಮತ್ತೆ ಇಂದು ಹೊಸ ದಾರಿದೀಪ. ತನ್ನ ಕಾಲದ ಪ್ರಸ್ತುತತೆಯನ್ನು ಮುಂದಿನ ಪೀಳಿಗೆಗೆ ಕೂಡಿಡುವ ಮತ್ತು ಹಳೆಯ ಮಾದರಿಯನ್ನು ಮರುಸೃಷ್ಟಿಸುವ ಕೆಲಸ ಇಂದು ಎಐನಿಂದ ಸಾಧ್ಯವಾಗುತ್ತಿದೆ. ಅಂದರೆ ಹಳೆಯ ಮಾದರಿಯನ್ನು ಬಿಟ್ಟು ಸಂಶೋಧನೆಗೆ ಹೊಸ ಮಾದರಿಯನ್ನು ರೂಪಿಸುವ ಮೂಲಕ ಬೆಳವಣಿಗೆಯ ಹೊಸ ಆವಿಷ್ಕಾರ ಕನ್ನಡದ ಮಟ್ಟಿಗೆ ಉಪಯುಕ್ತ.

ಇಂದು ತಂತ್ರಜ್ಞಾನ ವಿಕಸಿತಗೊಳ್ಳುತ್ತಿರುವ ವೇಗ ಗಮನಿಸಿದರೆ ಕೃತಕ ಬುದ್ಧಿಮತ್ತೆ ಎನ್ನುವುದು ಇತ್ತೀಚೆಗೆ ಸಾಮಾನ್ಯ ಕೆಲಸಗಳನ್ನು ನಿರ್ವಹಿಸುವ ಬೆಳವಣಿಗೆಯ ಮಾದರಿಯಾಗಿ ರೂಪಗೊಂಡಿದೆ. ಇಂದು ಸಂಶೋಧನೆ ಮತ್ತು ಶಿಕ್ಷಣವು ಹೊಸ ಒಲವಿನ ರೂಪಿಸುವಿಕೆಯ ಹಿಂದೆ ಸವಾರಿ ಹೊರಟಿದೆ. ಆದರೆ ಎಲ್ಲವೂ ಕೃತಕ ಬುದ್ಧಿಮತ್ತೆಯ ಅವಲಂಬನೆ ಆದರೆ ಮುಂದಿನ ಪೀಳಿಗೆಯ ಆಲೋಚನಾ ದಾರಿ ಹೇಗೆಂಬ ಪ್ರಶ್ನೆ ಮೂಡುವುದು ಸಹಜ. ಶಿಕ್ಷಣದಲ್ಲಾಗಲಿ ಸಂಶೋಧನೆಯಾಗಲಿ ರಚನಾತ್ಮಕವಾಗಿ ಯೋಚಿಸುವ ಮತ್ತು ಸ್ವತಂತ್ರ ಆಲೋಚನೆಯ ದಾರಿಗಳು ಯಾವುವು? ಎಂಬ ಆತಂಕವು ಮೂಡುತ್ತದೆ.

ಅನಕ್ಷರಸ್ಥರ ಅಕ್ಷರ ಸಾಕ್ಷರತೆ ಒಂದು ಕಡೆಯಾದರೆ ಅಕ್ಷರ ಡಿಜಿಟಲ್ ಸಾಕ್ಷರತೆ ಕೇವಲ ಅವಶ್ಯಕತೆಯಾದ ಕಾಲ ಒಂದಿತ್ತು. ಆದರೆ ಇಂದು ಎಐ ಸಾಕ್ಷರತೆಯು ಡಿಜಿಟಲ್ ಸಾಕ್ಷರತೆಯ ಒಂದು ಅವಿಭಾಜ್ಯ ಅಂಗವಾದರೂ ಅದರ ಬೇರು ಆಳವಾಗಿ ಮೂಡಿದೆ. ಇದು ಮಕ್ಕಳ ಬೆಳವಣಿಗೆಯನ್ನು ಸರಿಯಾಗಿ ನಡೆಸುವ ಪೋಷಕರು ಜಾಗೃತಿ ವಹಿಸಬೇಕಾದ ಜವಾಬ್ದಾರಿಯಾಗಿ ಪರಿಣಮಿಸಿದೆ. ಕೇವಲ ಜ್ಞಾನವನ್ನು ಪಡೆದುಕೊಳ್ಳುವ ಹಂಬಲ ಮಾತ್ರವಾಗಿರದೆ, ಅದರಿಂದ ಆಗುವ ಅನುಕೂಲ ಮತ್ತು ಅನಾನುಕೂಲಗಳನ್ನು ಪೋಷಕರು ಮತ್ತು ವಿದ್ಯಾರ್ಥಿಗಳು ಇಬ್ಬರೂ ಗಮನಿಸಬೇಕಾದ ಮತ್ತು ಆ ಮೂಲಕ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವ ಜವಾಬ್ದಾರಿ ಪ್ರತಿಯೊಬ್ಬರಲ್ಲೂ ಇರುವುದು ಅಗತ್ಯ.

**5. ಕನ್ನಡ ನಿಘಂಟುವಿನ ಮಾದರಿ ಹೊಸ ಪದಗಳ ಸೇರ್ಪಡೆ**

ಸಂಶೋಧನೆ ಮತ್ತು ಶಿಕ್ಷಣದ ಮಾದರಿ ಜಾಗತಿಕ ಮಟ್ಟದಲ್ಲಿ ಸಂಚಲನ ಸೃಷ್ಟಿಸಿದಂತೆ ಹೊಸ ಪದ ಸಂಪತ್ತು ಮತ್ತು ತಂತ್ರಜ್ಞಾನದ ಪದಗಳು ಸಹ ಸೇರ್ಪಡೆಗೊಳ್ಳುತ್ತಿರುವುದು ವಿಶೇಷ. ಆ ಮೂಲಕ ಪದಗಳ ಸಂಗ್ರಹವಾದಂತೆ ಭಾಷಾ ಸಂಪತ್ತಿನ ವಿಸ್ತರಣೆಯು ಆಗುತ್ತದೆ. ಕಲಿಕೆಯ ಹೊಸ ಮಾದರಿಗಳು ವಿಸ್ತರಣೆಗೆ ಸಹಕಾರಿ.

ಸಾಮಾಜಿಕ ಮಾಧ್ಯಮಗಳಲ್ಲಿ ಕನ್ನಡದ ಬಳಕೆ ಹೆಚ್ಚಿದಂತೆ ಹೊಸ ಹೊಸ ಪದಗಳ ಸೇರ್ಪಡೆ ಭಾಷಾ ವಿಸ್ತರಣೆಯನ್ನು ಪ್ರಸಾರದ ಮೂಲಕ ಹೆಚ್ಚಿಸುತ್ತದೆ. ಸಂಶೋಧನೆ ಮತ್ತು ಅನುವಾದದ ಮಟ್ಟಿಗಂತೂ ಕೃತಕ ಬುದ್ಧಿಮತ್ತೆ ಜಾಗತಿಕ ಮಟ್ಟದಲ್ಲಿ ಒಂದು ಹೆಜ್ಜೆ ಮುಂದಿದೆ ಎಂದರೆ ತಪ್ಪಿಲ್ಲ. ಎಐ ಮಾದರಿಯಿಂದ ತೆರೆಮರೆಯಲ್ಲಿ ತೆರೆಗೆ ಸರಿದಿದ್ದ ಹಲವು ಪ್ರತಿಭೆಗಳು

ಇಂದು ಸ್ವತಂತ್ರ ಹೆಜ್ಜೆ ಗುರುತಿಸಿಕೊಂಡಿವೆ. ಕಥೆ, ಕವಿತೆ, ಬರವಣಿಗೆಯ ಹೊಸ ಮಾದರಿಗಳಿಂದ ಇಂದು ಜಗತ್ತಿಗೆ ಚಂಗನೆ ಹಾರುವ ಮಾಯಾಜಾಲ ಸೃಷ್ಟಿಸಿಕೊಂಡಿವೆ.

ಉದಾ: ಒಂದು ಕವಿತೆಯನ್ನು ಬರೆಯುವಾಗ ಅಥವಾ ಹಾಡುವಾಗ ಕೃತಕ ಬುದ್ಧಿಮತ್ತೆಯ ಕೈಗೆ ಸಿಕ್ಕರೆ ಸಾಕು ಅದರ ಭಾವನೆಗಳನ್ನು ಒಮ್ಮೆಲೇ ಚಿತ್ರಿಸಿ, ರೂಪರೇಷೆಯನ್ನೂ ಕಲ್ಪಿಸಿ ಕೊಡುವ ಶಕ್ತಿ ಇದಕ್ಕಿದೆ. ಆ ಮೂಲಕ ಕವಿಯ ಹಾಡು ಒಂದು ಕಲ್ಪನೆಯಾಗಿರದೆ, ಆ ಹಾಡು ಧ್ವನಿಸುವ ಮಾಧ್ಯಮದ ಪ್ರತಿನಿಧಿಯಾಗಿಯೂ ಎಐ ಕಾರ್ಯರೂಪ ಪಡೆದಿದೆ ಎಂದರೆ ತಪ್ಪಿಲ್ಲ.

**6. ಬರವಣಿಗೆಯ ಸರಳ ಮಾರ್ಗಕ್ಕೆ ರಹದಾರಿ**

ಸಂಶೋಧಕನಾಗಲಿ, ಗುರುವಾಗಲಿ, ಕವಿಯಾಗಲಿ ಅಥವಾ ಲೇಖಕನಾಗಲಿ ತನಗನಿಸಿದ್ದನ್ನು ಬರೆಯ ಹೊರಟಾಗ ಹಿಂದೆ ಅವನಿಗೆ ಹಲವು ಸವಾಲುಗಳಿದ್ದವು. ಆದರೆ ಈ ಸವಾಲು ಇಂದು ಸರಳೀಕರಣಗೊಂಡಿದೆ. ಧ್ವನಿ ಗುರುತಿಸುವಿಕೆಯ ಮೂಲಕ ಇಂದು ಕನ್ನಡದಲ್ಲಿ ಟೈಪಿಂಗ್ ಸುಲಭವಾಗಿರುವುದರಿಂದ ಎಲ್ಲಾ ಬರಹಗಳು ಸುಲಭ ಮಾರ್ಗದಲ್ಲಿ ಬಹಳ ವೇಗದಲ್ಲಿ ತಲುಪುತ್ತಿವೆ. ಕವಿಯ ಸೃಷ್ಟಿ ಅಲ್ಲಾವುದ್ದೀನನ ಅದ್ಭುತ ದೀಪ ಎಂಬ ಮಾತು ಎಐ ಕಸಿದಿದೆ ಎಂದರೆ ತಪ್ಪಿಲ್ಲ.

ಪದಗಳನ್ನು ಅಥವಾ ವಾಕ್ಯಗಳನ್ನು ಹೇಳುವುದರ ಮೂಲಕ ಹಲವು ವಿಚಾರಗಳನ್ನು ತತ್‌ಕ್ಷಣವೇ ಪಡೆಯಬಹುದು. ಮಾಹಿತಿ ಕಣಜದ ರೂಪದಲ್ಲಿ ಕೆಲಸ ನಿರ್ವಹಿಸುತ್ತಿದೆ.

ಒಟ್ಟಾರೆಯಾಗಿ ಜಾಗತಿಕ ಮಟ್ಟದಲ್ಲಿ ಸಂಚಲನವನ್ನು ಸೃಷ್ಟಿಸಿದ ಕೃತಕ ಬುದ್ಧಿಮತ್ತೆ ಹೊಸ ಹೊಸ ಆಲೋಚನೆ ಮತ್ತು ಅವಕಾಶಗಳನ್ನು ನೀಡುತ್ತಿರುವುದು ಸರಿಯಷ್ಟೇ. ಆದರೆ ಹೊಸ ತಲೆಮಾರಿಗೆ ಅಂದರೆ ಮುಂದಿನ ಪೀಳಿಗೆಗೆ ಚೌಕಟ್ಟಿನ ಶಿಕ್ಷಣ, ನೈತಿಕ ಜವಾಬ್ದಾರಿಯನ್ನು ಕಲಿಸುವ ನಿಟ್ಟಿನಲ್ಲಿ ಎಷ್ಟರಮಟ್ಟಿಗೆ ಕೆಲಸ ಮಾಡುತ್ತದೆಂಬ ಸವಾಲನ್ನು ಸೃಷ್ಟಿಸಿದೆ.

ಉದಾ: ಎಐ ನೀಡುವ ಮಾಹಿತಿ ಹಲವು ವೇಳೆ ನಿಖರವಾಗಿರುವುದಿಲ್ಲ. ಏಕೆಂದರೆ ಮಾಹಿತಿ ಕಣಜ ಎಂದು ಕರೆಸಿಕೊಳ್ಳುವ ಇದಕ್ಕೆ ಸರಿಯಾದ ಮಾಹಿತಿ ಮತ್ತು ನಿಖರತೆಯನ್ನು ಅಳವಡಿಸುವ ಜವಾಬ್ದಾರಿಯ ಅರಿವಿರಬೇಕು. ಮತ್ತು ಅದರ ನಿಖರ ತರಬೇತಿಯನ್ನು ಎಐಗೆ ನೀಡಿದರೆ ಮಾತ್ರ ಇದರಿಂದ ಮಾರ್ಗದರ್ಶನ ಪಡೆದುಕೊಳ್ಳಲು ಸಾಧ್ಯವಾಗುತ್ತದೆ, ಇಲ್ಲವಾದಲ್ಲಿ ಹಲವು ವೇಳೆ ಮಾಹಿತಿಯ ಕೊರತೆ ಉಂಟಾಗುತ್ತದೆ.

**7. ಕೃತಕ ಬುದ್ಧಿಮತ್ತೆ ಎಂಬ ಮಾಯಾಲೋಕದಲ್ಲಿ ಜವಾಬ್ದಾರಿಯುತ ಬಳಕೆ ಅಗತ್ಯ**

ಒಬ್ಬ ವ್ಯಕ್ತಿಯ ಚಿತ್ರವನ್ನು ಕೃತಕ ಬುದ್ಧಿಮತ್ತೆಯ ಕೈಗಿಟ್ಟರೆ ಹುಟ್ಟಿನಿಂದ ಹಿಡಿದು ವೃದ್ಧಾಪ್ಯದ ಚಿತ್ರಣವನ್ನು ಏಕಕಾಲದಲ್ಲಿ ಚಿತ್ರಿಸುತ್ತದೆ. ಇದು ಕೆಲವು ಸಂದರ್ಭದಲ್ಲಿ ಒಳಿತಾದರೆ ಅಪಾಯದ ಹಂತವನ್ನು ಸೂಚಿಸುತ್ತದೆ. ಮಕ್ಕಳ ವಿಷಯದಲ್ಲಿ ಅವರ ಬೆಳವಣಿಗೆ ಹಂತದಲ್ಲಿ, ಶಿಕ್ಷಣ ಹಂತದಲ್ಲಿ ಎಷ್ಟು ಪರಿಣಾಮಕಾರಿಯೋ ಅಷ್ಟೇ ಅಪಾಯಕಾರಿಯೂ ಹೌದು. ಪೋಷಕರ ಜವಾಬ್ದಾರಿ ಮತ್ತು ಎಐನ ಕನಿಷ್ಠ ಅರಿವು ಅವರಿಗಿದ್ದಾಗ ಇದರ ಬಳಕೆ ಉಪಯುಕ್ತವಾದುದು. ಇಲ್ಲವಾದಲ್ಲಿ ಸೈಬರ್ ಕ್ರೈಂನಂತಹ ಅಪರಾಧಗಳಲ್ಲಿ ಅಥವಾ ಮಾನಸಿಕ ಖಿನ್ನತೆಗೆ ಸಿಕ್ಕಿಕೊಳ್ಳುವ ಸಂದರ್ಭವೇ ಹೆಚ್ಚು.

**8. ತಂತ್ರಜ್ಞಾನದ ಅತಿಯಾದ ಬಳಕೆ ಮತ್ತು ಸೃಜನಶೀಲತೆಯನ್ನು ಕಡಿಮೆ ಮಾಡುವ ಸಾಧ್ಯತೆ**

ಆಲೋಚನೆ ಮತ್ತು ಚಿಂತನೆ ಹಾಗೂ ಸಂಶೋಧನೆ ಮಾರ್ಗಕ್ಕಿಂತ ವೇಗವಾಗಿ

ಮತ್ತು ಸುಲಭವಾಗಿ ಲಭ್ಯವಾಗುವ ಮಾರ್ಗ ಹಿಡಿದು ಮಾಹಿತಿಯನ್ನು ಕಲೆ ಹಾಕುವ ಹಂತಕ್ಕೆ ನಾವಿಂದು ತಲುಪಿದ್ದೇವೆ. ಇದರಿಂದ ಸೃಜನಶೀಲತೆಯ ಬೆಳವಣಿಗೆ ಕುಂಠಿತವಾಗುತ್ತದೆ. ಭಾಷೆ ಹೊಸ ಪದಗಳ ಸೃಷ್ಟಿ ಮಾಡಿಕೊಳ್ಳುವಲ್ಲಿ ಎಡವುತ್ತದೆ. ಆದ್ದರಿಂದ ಚರ್ಚೆ, ಸಂವಾದ ಮತ್ತು ವಿಚಾರ ಸಂಕಿರಣಗಳು ಸಮೂಹದ ನಡುವೆ ಮುಕ್ತ ಮಾತುಕತೆಗಳು ನಡೆದಾಗ ಪದಗಳಿಗೆ ಎಡತಾಕಬೇಕಿಲ್ಲ. ಆ ಮೂಲಕ ಪದ ಸಂಪತ್ತು ಯಥೇಚ್ಛವಾಗಿ ಸೃಷ್ಟಿಯಾದಾಗ ಸಾಹಿತ್ಯ ಕೃಷಿ ಹುಲುಸಾಗಿ ಬೆಳೆಯುತ್ತದೆ. ಅಭಿವೃದ್ಧಿ ಎನ್ನುವ ಹೆಸರಿನಲ್ಲಿ ಸಂರಕ್ಷಣೆ ಎನ್ನುವ ನೆಪದಲ್ಲಿ ಪದಗಳ ಹುಟ್ಟನ್ನು ಮರೆಮಾಚಬಾರದು.

**9. ಭಾಷಾ ಸಂರಕ್ಷಣೆ ಸವಾಲುಗಳು ಮತ್ತು ಅಪಾಯಗಳು**

ಎಐ ಟೂಲ್‌ಗಳು ಕೆಲವೊಂದು ಸಂದರ್ಭದಲ್ಲಿ ತಪ್ಪು ಮಾಹಿತಿ ನೀಡಬಹುದು. ಇದರಿಂದ ನಿಖರತೆ ಮತ್ತು ನೈಜತೆಯ ಮೇಲೆ ಸವಾಲನ್ನು ಒಡ್ಡುತ್ತವೆ. ಪ್ರಾದೇಶಿಕ ಭಾಷೆ ಮತ್ತು ಸೊಗಡಿನ ಧ್ವನಿತ್ವವನ್ನು ಅರ್ಥ ಮಾಡಿಕೊಳ್ಳುವಲ್ಲಿ ವಿಫಲವಾದರೆ ಅದು ಘನೀಕೃತ ಸಾಂಸ್ಕೃತಿಕ ಚೌಕಟ್ಟನ್ನು ಒಡೆಯುತ್ತದೆ. ಹಾಗಾದರೆ ಭಾಷಾ ಸಂರಕ್ಷಣೆ ಮಾಧ್ಯಮವಾಗಿರದೆ ಸಮುದಾಯಕ್ಕೆ ಅದು ಮಾರಕ. ಕೇವಲ ಧ್ವನಿ ಮುದ್ರಣ ಮಾತ್ರವಾದರೆ ಭಾವನೆಗಳು ಮತ್ತು ಅದನ್ನು ಸೃಜಿಸುವ ವ್ಯಕ್ತಿ ಇಲ್ಲಿ ಗೌಣವಾಗುತ್ತಾನೆ. ಇದು ಕೇವಲ ಸಂದೇಶವೋ ಮಾಹಿತಿಯೋ ಆದರೆ ಸಮುದಾಯದ ಸಂಘಟನೆ ಅಸಾಧ್ಯ.

**10. ನೈಜತೆ ಮತ್ತು ಗೌಪ್ಯತೆ ಕಾಪಾಡುವಲ್ಲಿ ಎಚ್ಚರ ಅಗತ್ಯ**

ಡೇಟಾ ಬಳಕೆ ಮತ್ತು ಭದ್ರತೆಯ ದೃಷ್ಟಿಯಿಂದ ಇದರ ಸೂಕ್ಷ್ಮತೆಯ ಅರಿವಿರಬೇಕು, ಇಲ್ಲವಾದಲ್ಲಿ ಕೆಲವೊಂದು ಸಂದರ್ಭದಲ್ಲಿ ಅರಿವಿಗೆ ಬಾರದೆಯೂ ಇದರ ಅಪಾಯದ ಮಟ್ಟ ಹೆಚ್ಚಿರುತ್ತದೆ. ಮಾಹಿತಿ ಪಡೆದುಕೊಳ್ಳಬೇಕು ಅಥವಾ ಅದನ್ನು ಸಮೂಹಕ್ಕೆ ತಲುಪಿಸಬೇಕು ಎನ್ನುವ ಧಾವಂತದಲ್ಲಿ ಇಂತಹ ಅಪಾಯಗಳಿಗೆ ಸಿಲುಕುವ ಸಂದರ್ಭ ಹೆಚ್ಚು. ಎಐ ಬಳಕೆಯಿಂದ ಲರ್ನಿಂಗ್ ಸಿಸ್ಟಮ್ ಮಾದರಿ ಹೊಸತನವನ್ನು ಪಡೆದರೂ ಅಧ್ಯಾಪಕ ಮತ್ತು ವಿದ್ಯಾರ್ಥಿಗಳ ನಡುವಿನ ಸಂಬಂಧ ಬಿರುಕು ಮೂಡುತ್ತದೆ. ವಿದ್ಯಾರ್ಥಿಗಳ ಏಕಾಗ್ರತೆ, ಸಮಯ ಪಾಲನೆ, ಶಿಸ್ತು ಎಲ್ಲವೂ ಸಹ ವೈಯಕ್ತಿಕ ಆಸಕ್ತಿಯ ಹಂತಗಳಾಗಿ ಪರಿಣಮಿಸುತ್ತವೆ. ಭಾಷಾ ಸಂರಕ್ಷಣೆ ಮತ್ತು ಅಭಿವೃದ್ಧಿ ದೃಷ್ಟಿಯಿಂದ ನೋಡುವುದಾದರೆ ಕೃತಕ ಬುದ್ಧಿಮತ್ತೆ ಹಲವು ಮಾದರಿಗಳಲ್ಲಿ ಉಪಯುಕ್ತವಾದದ್ದು ಆದರೂ ಪರಿಣಾಮಗಳು ಅಷ್ಟೇ ಮುಖ್ಯ. ಹಾಗಾಗಿ ಕನ್ನಡ ಸಾಹಿತ್ಯದಲ್ಲಿ ಭಾಷಾ ಸಂರಕ್ಷಣೆ ಮತ್ತು ಅಭಿವೃದ್ಧಿ ಮಾರ್ಗಗಳು ಕೃತಕ ಬುದ್ಧಿಮತ್ತೆಯ ರೂಪ ಜಾಗತಿಕ ಮಟ್ಟದಲ್ಲಿ ಕ್ರಾಂತಿ ಮೂಡಿಸಿವೆ ಎಂದರೆ ತಪ್ಪಿಲ್ಲ.

ಒಟ್ಟಾರೆಯಾಗಿ ಕನ್ನಡ ಸಾಹಿತ್ಯದ ಮಟ್ಟಿಗಂತೂ ಎಐನ ಬಳಕೆ ಪ್ರಸ್ತುತತೆಯ ಸಂದರ್ಭದಲ್ಲಿ ಅತ್ಯಗತ್ಯ, ಇದರಿಂದ ನಮ್ಮ ಜ್ಞಾನ ಸಂಪತ್ತಿನ ಶೇಖರಣೆ ಸಂಸ್ಕರಣೆ ಮತ್ತು ಪ್ರಸರಣೆ ಇವೆಲ್ಲದರ ಅಗತ್ಯತೆ ನಮಗಿದೆ. ಅದಾಗ್ಯೂ ಭಾಷಾ ಅಭಿವೃದ್ಧಿ ಗಮನಿಸಿದಾಗ ಹೊಸ ಪದಗಳು ಮತ್ತು ಹೊಸ ನಾವೀನ್ಯತೆ ಅಗತ್ಯವಿದೆ. ಮುಂಬರುವ ಪೀಳಿಗೆಗೆ ಸಂಸ್ಕೃತಿ ಮತ್ತು ನಮ್ಮ ಸಮಾಜದ ಅರಿವಿಗೆ ಈ ಸಾಹಿತ್ಯ ಬೇಕು, ಆದ್ದರಿಂದ ಕನ್ನಡ ಸಾಹಿತ್ಯದಲ್ಲಿ ಎಐ ಬಳಕೆ ಹೊಸ ಮತ್ತು ಅಗತ್ಯತೆಯ ರೂಪವಾಗಿ ಸ್ವೀಕರಿಸೋಣ.